ಇಂದು ದಿನಾಂಕಃ 07.02.2020 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ 1 ಮತ್ತು 3 ರವರ ಪರ ವಕೀಲರಿಂದಃ ನಿಪಿ 6 ನ್ನು 1932 ರಂದು ತಯಾರಿಸಲಾಗಿದೆ. ದಿನಾಂಕ, ತಿಂಗಳು ಗೊತ್ತಿಲ್ಲ. ನಿಪಿ 6 ರ ದಾಖಲೆಯನ್ನು ಮಂಚಮ್ಮರವರು ಸಿದ್ಧಾಚಾರ್ ರವರಿಗೆ ಬರೆದುಕೊಟ್ಟಿರುತ್ತಾರೆ. ಸದರಿ ದಾಖಲೆಯನ್ನು ಯಾರು ಬರೆದಿದ್ದಾರೆ ಎಂದರೆ, ಗೊತ್ತಿಲ್ಲ. ಸದರಿ ದಾಖಲೆಗೆ ಯಾರು ಸಾಕ್ಷಿಗಳಾಗಿ ಸಹಿ ಹಾಕಿದ್ದಾರೆ ಎಂದರೆ, ಗ್ರಾಮಸ್ಥರು ಹಾಕಿದ್ದಾರೆ, ನಿಹರವಾಗಿ ಅವರ ಹೆಸರುಗಳು ಗೊತ್ತಿಲ್ಲ. ನಿಪಿ 6 ನನ್ನ ತಾತನ ಹೆಸರಿಗೆ ಬರೆದಿರುವ ವಿಲ್ಲಾಗಿರುತ್ತದೆ. ಮಂಚಮ್ಮರವರು ಎರಡು ಆಸ್ತಿಗಳಿಗೆ ಸಂಬಂಧಿಸಿದಂತೆ ವಿಲ್ಲನ್ನು ಬರೆದಿರುತ್ತಾರೆ. ಮಂಚಮ್ಮರವರು ಸರ್ವೆ ನಂ. 31/1 (ಜಂಜರ್ ನಂ. 34) ಮತ್ತು ಇನ್ನೊಂದು ಆಸ್ತಿಗೆ ವಿಲ್ಲನ್ನು ಬರೆದಿರುತ್ತಾರೆ ಅದರ ಸಂಖೆ ಗೊತ್ತಿಲ್ಲ. ಮಂಚಮ್ಮ ಸಿದ್ಧಾಚಾರ್ ರವರಿಗೆ ಮೂರು ಆಸ್ತಿಗಳಿಗೆ ಸಂಬಂಧಿಸಿದಂತೆ ವಿಲ್ಲನ್ನು ಬರೆದಿದ್ದಾರೆ ಎಂದರೆ ಸರಿಯಲ್ಲ. ಮಂಚಮ್ಮರವರು ಬಿಳಿಕೆರೆ ಗ್ರಾಮದ ಸರ್ವೆ ನಂ. 10 ರ 5 ಎಕರೆ 16 ಗುಂಟೆ ಪೈಕಿ 2 ಎಕರೆ 28½ ಗುಂಟೆ ಜಮೀನಿಗೆ ಸಂಬಂಧಿಸಿದಂತೆ ವಿಲ್ಲನ್ನು ಬರೆದಿದ್ದಾರೆ ಎಂದರೆ ಸರಿ. ವಿಲ್ಲಿನಲ್ಲಿ ಹೌಸ್ ಲೀಸ್ಟ್ ನಂ.31/1 ಯನ್ನು ನಮೂದಿಸಿದ್ದಾರಾ ಎಂದರೆ, ನಮೂದಿಸಿರುತ್ತಾರೆ. ವಿಲ್ಲಿನಲ್ಲಿ ನಮೂದಿಸಿರುವ ಆಸ್ತಿಗೆ ಚೆಕ್ಕುಬಂಧಿ ಗೊತ್ತೇ ಎಂದರೆ, ಗೊತ್ತು. ಸದರಿ ಆಸ್ತಿಗೆ ಚೆಕ್ಕುಬಂಧಿಃ ಪೂರ್ವ - ಪಶ್ಚಿಮಕ್ಕೆ ರಸ್ತೆ ಎಂದರೆ ಸರಿ. ದಕ್ಷಿಣಕ್ಕೆಃ ಗಾಣಿಗರ ಮೊಗಣ್ಣ ಮತ್ತು ದಾಸಾಚಾರಿ ಮಗ ಬೆಟ್ಟಾಚಾರಿ ಕುಲುಮೆ, ಕೊಟ್ಟಿಗೆ ಖಾಲಿ ಜಾಗ ಎಂದರೆ ಸರಿ. ಉತ್ತರಕ್ಕೆಃ ಹೈವೇ ರೋಡ್ ಮತ್ತು ಚರಂಡಿ ಎಂದರೆ ಸರಿ. ಒರಿಜಿನಲ್ ಖಾತಾ 359 ನೇ ಹೌಸ್ ಲಿಸ್ಟ್ ನಂ. 31 ಕ್ಕೆ ವಿಲ್ ಬರೆದಿರುತ್ತಾರೆ ಎಂದರೆ ಸರಿಯಲ್ಲ. 31/1 ಕ್ಕೆ ಸಂಬಂಧಿಸಿದಂತೆ ವಿಲ್ಲನ್ನು ಬರೆದಿರುತ್ತಾರೆ. ಸದರಿ ಆಸ್ತಿಯ ವಿಸ್ತೀರ್ಣ ಪೂರ್ವ-ಪಶ್ಚಿಮ 33 ಗಜ ಉತ್ತರ-

ದಕ್ಷಿಣ 16½ ಗಜ ಎಂದರೆ ಸರಿ.

ವಿಲ್ಲಿನಲ್ಲಿ ನಮೂದಿಸಿರುವ ಇನ್ನೊಂದು ಸ್ವತ್ತು ಒರಿಜಿನಲ್ ಖಾತಾ ನಂ. 123 ಕ್ಕೆ ಹೌಸ್ ಲಿಸ್ಟ್ 163 ನಂ. ಆಗಿ ಇರುವ 5 ಅಂಕಣ 3 ತೊಲೆ ಜಂಟಿ ಇರುವ ಹೆಂಚಿನ ಮನೆ ಪೈಕಿ ಭಾವಂದಿರ ಮಗ ಬೆಟ್ಟಾಚಾರಿಗೆ ಹಿಸ್ಸೆ ಹೋಗಿರತಕ್ಕ ಪಶ್ಚಿಮ ಭಾಗದ 2 ಅಂಕಣ ಆಯವುಳ್ಳ 3 ಅಂಕಣ ಆಯವುಳ್ಳ ಮನೆ ಎಂದರೆ ಸರಿ. ಅದರಿ ಸರ್ವೆ ನಂ. 30 ಆಗಿರುತ್ತದೆ. ದಾವಾ ಷೆಡ್ಯೂಲ್ ಸ್ವತ್ತಿನ ದಕ್ಷಿಣಕ್ಕೆ ಇರುವ ಬೆಟ್ಟಾಚಾರಿ ಮತ್ತು ಅವರ ಮಗ ಪುಟ್ಟಸ್ವಾಮಾಚಾರಿ ಈಗ ಪೌತಿಯಾಗಿದ್ದಾರೆ ಎಂದರೆ ಸರಿ. ಪುಟ್ಟಾಸ್ವಾಮಿಚಾರಿಗೆ ಭಾಗ್ಯಮ್ಮ ಎಂಬ ಹೆಂಡತಿ, ಚೆಲುವಾಚಾರಿ, ಪ್ರೇಮ, ಕೃಷ್ಣಾಚಾರಿ, ಮೂರ್ತಿ ಮತ್ತು ಮೋಹನ ಎಂಬ ಮಕ್ಕಳು ಇದ್ದಾರೆ ಎಂದರೆ ಸರಿ. ಮೂರ್ತಿರವರ ಹೆಂಡತಿಯ ಹೆಸರು ಚಂದ್ರಕಲಾ ಅಲಿಯಾಸ್ ಚಂದ್ರಮ್ಮ ಎಂದರೆ ಸರಿ. ದಾವಾ ಆಸ್ತಿಯ ದಕ್ಷಿಣಕ್ಕೆ ಬೆಟ್ಟಾಚಾರಿರವರ ಹೆಂಡತಿ ಮತ್ತು ಮಕ್ಕಳ ಹೆಸರನ್ನು ನಮೂದಿಸಿಲ್ಲ ಎಂದರೆ ಸರಿ, ಆಗಿನಿಂದಲೂ ಅದು ಬೆಟ್ಟಾಚಾರಿರವರ ಹೆಸರಿನಲ್ಲಿರುತ್ತದೆ. ಅದರಲ್ಲಿ ಅರ್ಧಭಾಗವನ್ನು ನನ್ನ ತಾತ ಖರೀದಿಸಿರುತ್ತಾರೆ. ಅದು ನನ್ನ ತಾತನ ಹೆಸರಿನಲ್ಲಿರುತ್ತದೆ. ಬೆಟ್ಟಾಚಾರಿರವರ ಹೆಸರಿನಲ್ಲಿದ್ದ ಆಸ್ತಿಯನ್ನು ಅವರ ಮಕ್ಕಳು ಖಾತೆ ಮಾಡಿಸಿಕೊಂಡು ಅನುಭವಿಸುತ್ತಿದ್ದಾರೆ ಎಂದರೆ ಸರಿ. ಕೃಷ್ಣಾಚಾರಿರರು ಪೌತಿಯಾಗಿದ್ದು, ಅವರ ಹೆಂಡತಿ ಧ್ರಾಕ್ಷಾಯಿಣಿ ಮತ್ತು ಮಕ್ಕಳಾದ ಮಂಜುಳ, ಪ್ರೇಮ, ವಾಮನ್ ಇದ್ದಾರೆ ಎಂದರೆ ಸರಿ. ಧ್ರಾಕ್ಷಾಯಿಣಿ ಮತ್ತು ಅವರ ಮಕ್ಕಳು ದಿಃ 02.01.2017 ರಂದು ಬಿಳಿಕೆರೆ ಸ್ವತ್ತಿನ ಸಂಖ್ಯೆಃ 33/30/2/ಡಿ ಯ ಪೂರ್ವ – ಪಶ್ಚಿಮ 14.63 ಮೀ ಮತ್ತು ಉತ್ತರ – ದಕ್ಷಿಣ 3.65 ಮೀ ವಿಸ್ತೀರ್ಣದ ಸೈಟನ್ನು ಕೆ ಹೆಚ್ ಪುಟ್ಟಣಶೆಟ್ಟಿಯವರಿಂದ ಖರೀದಿಸಿರುತ್ತಾರೆ ಎಂದರೆ ಸರಿ, ಆದರೆ ಸರ್ವೆ ನಂ. 30 ಆಗಿರುತ್ತದೆ. ಸದರಿ ಸ್ವತ್ತಿನ ಚೆಕ್ಕುಬಂಧಿ ಪೂರ್ವಕ್ಕೆ ಪಂಚಾಯಿತಿ ರಸ್ತೆ ಎಂದರೆ ಸರಿ. ಪಶ್ಚಿಮಕ್ಕೆಃ ಗಂಗಾಧರಚಾರಿಯವರ ನಿವೇಶನ ಎಂದರೆ ಸರಿಯಲ್ಲ. ಉತ್ತರಕ್ಕೆಃ ಎಕ್ಬಾಲ್ ಪಾಷರವರ ಮನೆ ಎಂದರೆ ಸರಿ. ದಕ್ಷಿಣಕ್ಕೆಃ ಬೆಟ್ಟಾಚಾರಿರವರ ಸ್ವತ್ತು ಇರುತ್ತದೆ ಎಂದರೆ ಸರಿ. ಸಾಕ್ಷಿಗೆ ದೃಡೀಕೃತ ಕ್ರಯ ಪತ್ರದಲ್ಲಿರುವ ಫೋಟೋಗಳನ್ನು ತೋರಿಸಲಾಗಿ ಸಾಕ್ಷಿಯು ಸದರಿ ಫೋಟೋಗಳನ್ನು ಧ್ರಾಕ್ಷಾಯಿಣಿ, ಅವರ ಮಕ್ಕಳಾದ ಮಂಜುಳ, ಪ್ರೇಮ ಮತ್ತು ವಾಮನ್ ಎಂದು ಗುರುತಿಸಿರುತ್ತಾರೆ. ಅದ್ದರಿಂದ ಸದರಿ ದಾಖಲೆಯನ್ನು ನಿಪಿ 1, ಸದರಿಯವರ ಫೋಟೋಗಳನ್ನು ನಿಡಿ 1(ಎ)ಯಿಂದ (ಡಿ) ಎಂದು ಗುರುತಿಸಲಾಯಿತು. ದಾವಾ ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ನಿಪಿ 6 ರಲ್ಲಿ ನಮೂದಿಸಿರುವ ದಿನಾಂಕದಂದ ದಾವಾ ಸಲ್ಲಿಸುವವರೆಗೆ ಇಸಿಯನ್ನು ಪರಿಶೀಲಿಸಿದ್ದೀರಾ ಎಂದರೆ, ಪರಿಶೀಲಿಸಿರುತ್ತೇನೆ. ಸದರಿ ದಾಖಲೆಯನ್ನು ನ್ಯಾಕ್ಕೆ ಹಾಜರು ಮಾಡಿರುತ್ತೇನೆ. ದಿಃ

**01.04.2004** ರಿಂದ ದಿಃ **11.08.2014** ರವರೆಗಿನ ಇಸಿಯನ್ನು ಮಾತ್ರ ಹಾಜರು ಮಾಡಿದ್ದು ಅದನ್ನು ನಿಪಿ **2** ಎಂದು ಗುರುತಿಸಲಾಗಿದುದ, ಅದಕ್ಕಿಂತ ಪೂರ್ವದ ಇಸಿಯನ್ನು ಹಾಜರು ಮಾಡಿಲ್ಲ ಎಂದರೆ ಸರಿಯಲ್ಲ. ನಿಪಿ **3** ರಲ್ಲಿ **33** ಇಂಟು **16½** ಗಜಕ್ಕೆ ಸಂಬಂಧಿಸಿದಂತೆ ಕಂದಾಯವನ್ನು ಪಾವತಿಸಲಾಗಿದೆ ಎಂದು ನಮೂದು ಮಾಡಿದ್ದಾರಾ ಎಂದರೆ, ನಮೂದು ಮಾಡಿದ್ದಾರೆ. ಸಾಕ್ಷಿಯು ಸದರಿ ದಾಖಲೆಯನ್ನು ಪರಿಶೀಲಿಸಿ ಕಂದಾಯ ಕಟ್ಟಿರುವ ಆಸ್ತಿಗೆ ಸಂಬಂಧಿಸಿದಂತೆ ವಿಸ್ತೀರ್ಣವನ್ನು ನಮೂದು ಮಾಡಿಲ್ಲ ಎಂದು ಹೇಳುತ್ತಾರೆ. ನಿಪಿ **4** ರಲ್ಲಿ ಆಸ್ತಿಯ ವಿವರ ಮತ್ತು ವಿಸ್ತೀರ್ಣವನ್ನು ನಮೂದಿಸಿಲ್ಲ ಎಂದರೆ ಸರಿಯಲ್ಲ.

ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ವಕೀಲರು ಸಮಯಕೋರಿದ್ದು, ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸ.ಇದೆ.

ಪ್ರಧಾನ ಹಿರಿಯ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.,
ನ್ಯಾಯಾಧೀಶರು, ಹುಣಸೂರು.